ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1156 (1107)
ಮಾನ್ಯ ಸದಸ್ಯರ ಹೆಸರು	ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	23/12/2021
ಉತ್ತರಿಸುವವರು	ಕಾರ್ಮಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಜುಲೈ 2020 ರ ಕರೋನಾ ಪೀಡಿತಾವಧಿಯಲ್ಲಿ ಮೃತಪಟ್ಟವರ ಪೈಕಿ ಎರಡು ಮೃತ ದೇಹಗಳು ಈವರೆಗೂ ರಾಜಾಜಿನಗರದ ಇ.ಎಸ್.ಐ ಶವಾಗಾರದಲ್ಲೇ ಉಳಿದ ಆಘಾತಕಾರಿ ಘಟನೆ ಬೆಳಕಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು
ಆ)	ಬಂದಿದ್ದಲ್ಲಿ, ಈ ಪ್ರಕರಣದ ಬಗ್ಗೆ ನಿರ್ಲಕ್ಷ್ಯ ವಹಿಸಿರುವವರ ವಿರುದ್ಧ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದೇ?	ಕಾರ್ಮಿಕರ ರಾಜ್ಯ ವಿಮಾ ನಿಗಮ, ಮೆಡಿಕಲ್ ಕಾಲೇಜ್ ಮತ್ತು ಪೋಸ್ಟ್ ಗ್ರಾಜುಯೇಟ್ ಇನಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಅಂಡ್ ರಿಸರ್ಚ್, ರಾಜಾಜಿನಗರ, ಬೆಂಗಳೂರು (ESIC, Medical College and Post Graduate Institute of Medical Sciences and Research, Rajajinagar, Bengaluru) ಈ ಆಸ್ಪತ್ರೆಯು ಕೇಂದ್ರ ಸರ್ಕಾರದ ಕಾರ್ಮಿಕರ ರಾಜ್ಯ ವಿಮಾ ನಿಗಮದ ವ್ಯಾಪ್ತಿಗೆ ಬರುತ್ತದೆ. ಸದರಿ ನಿಗಮವು ನೀಡಿರುವ ಮಾಹಿತಿಯಂತೆ ರಾಜಾಜಿನಗರದ ಕಾರ್ಮಿಕರ ರಾಜ್ಯ ವಿಮಾ ನಿಗಮದ ಮಾದರಿ ಆಸ್ಪತ್ರೆಯ ಡೀನ್ ಮತ್ತು ವೈದ್ಯಕೀಯ ಅಧೀಕ್ಷಕರು, ಇವರು ತಮ್ಮ ಪತ್ರದ ದಿನಾಂಕ: 29-11-2021 ರಲ್ಲಿ ದಿನಾಂಕ: 27-11-2021 ರಂದು ಬೆಳಿಗ್ಗೆ 10.30ರ ಸಮಯದಲ್ಲಿ ಆಸ್ಪತ್ರೆಯ ಹಳೆಯ ಶವಾಗಾರದಲ್ಲಿ 02 ಶವಗಳು ಇರುವುದಾಗಿ ಆಡಳಿತದ ಗಮನಕ್ಕೆ ಬಂದಿದ್ದು, ತಕ್ಷಣ ಹತ್ತಿರದ ರಾಜಾಜಿನಗರ ಪೋಲಿಸ್ ಠಾಣೆಗೆ ಮಾಹಿತಿಯನ್ನು ನೀಡಿರುವುದಾಗಿ ತಿಳಿಸಿರುತ್ತಾರೆ.

		ಸದರಿ ವಿಷಯದ ಕುರಿತು/ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾದ ಈ ಮಾಹಿತಿಯ ಹಿನ್ನೆಲೆಯಲ್ಲಿ ದಿನಾಂಕ: 29-11-2021 ರಂದೇ ತನಿಖೆಯನ್ನು ನಡೆಸುವ ಕುರಿತು ಹಾಗೂ ವರದಿ ಸಲ್ಲಿಸಲು ಸೂಚಿಸಲಾಗಿದೆ. ಕಾರ್ಮಿಕರ ರಾಜ್ಯ ವಿಮಾ ನಿಗಮದ ವತಿಯಿಂದ ಪ್ರಾಥಮಿಕ ವರದಿಯೊಂದಿಗೆ ತನಿಖೆ ನಡೆಸಲು ಹಿರಿಯ ಅಧಿಕಾರಿಗಳ ಒಂದು ಸಮಿತಿಯನ್ನು ರಚಿಸಿದ್ದು ಸದರಿ ಕಾರ್ಮಿಕರ ರಾಜ್ಯ ವಿಮಾ ನಿಗಮ, ನವದೆಹಲಿ ಇವರಿಂದ ರಚಿಸಲಾದ ಸಮಿತಿಯ ಅಧಿಕಾರಿಗಳು ದಿನಾಂಕ: 02-12-2021 ರಂದು ಕಾರ್ಮಿಕರ ರಾಜ್ಯ ವಿಮಾ ನಿಗಮ ಮಾದರಿ ಆಸ್ಪತ್ರೆ, ರಾಜಾಜಿನಗರ ಇಲ್ಲಿಗೆ ಭೇಟಿ ನೀಡಿದ್ದು ಕಾರ್ಮಿಕರ ರಾಜ್ಯ ವಿಮಾ ನಿಗಮ, ನವದೆಹಲಿ ಇವರಿಂದ ವರದಿಯನ್ನು ನಿರಿಕ್ಷೀಸಲಾಗುತ್ತಿದೆ ಎಂದು ತಿಳಿದುಬಂದಿರುತ್ತದೆ. ಅಲ್ಲದೆ ಕಾರ್ಮಿಕರ ರಾಜ್ಯ ವಿಮಾ ನಿಗಮವು ಆಸ್ಪತ್ರೆಯ ಡೀನ್‌ರವರನ್ನು ವರ್ಗಾಯಿಸಿ ಆ ಸ್ಥಳಕ್ಕೆ ಮತ್ತೊಬ್ಬರನ್ನು ನೇಮಿಸಲಾಗಿರುತ್ತದೆ.

ಕಾಇ 405 ಎಲ್‌ಎಸ್‌ಐ 2021

(ಅರಬೈಲ್ ಶಿವರಾಮ ಹೆಬ್ಬಾರ್)
ಕಾರ್ಮಿಕ ಸಚಿವರು